# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 873 |
| ಉತ್ತರಿಸುವ ದಿನಾಂಕ | 21-09-2022 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಮನಗರ ಜಿಲ್ಲೆ ಚನ್ನಪಟ್ಟಣ ಟೌನ್‌ನಲ್ಲಿರುವ ಉಪ ನೋಂದಣಾಧಿಕಾರಿಗಳ ಕಛೇರಿಯು ಬಹಳ ಇಕ್ಕಟ್ಟಿನ ಜಾಗದಲ್ಲಿದ್ದು, ಈ ಕಛೇರಿಗೆ ಬರುವವರಿಗೆ ಕುಳಿತುಕೊಳ್ಳಲು ಸ್ಥಳವಕಾಶವಿಲ್ಲದಿರುವುದು ಮತ್ತು ಇಲ್ಲಿ ಸಾರ್ವಜನಿಕರಿಗಾಗಿ ಶೌಚಾಲಯದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಸಹ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಚನ್ನಪಟ್ಟಣ ಉಪನೋಂದಣಿ ಕಛೇರಿಯು ಕಟ್ಟಡ ಸಂಖ್ಯೆ:2240/ಎ, 1ನೇ ಕ್ರಾಸ್, ಕುವೆಂಪುನಗರ, ಬಿ.ಎಮ್ ರೋಡ್, ಚನ್ನಪಟಣ ಟೌನ್ ರಾಮನಗರ ಇಲ್ಲಿ 2357 ಚದರಡಿ ವಿಸ್ತೀರ್ಣದ ಕಟ್ಟಡದಲ್ಲಿ 2009ನೇ ಸಾಲಿನಿಂದ ಕಾರ್ಯನಿರ್ವಹಿಸುತ್ತಿದ್ದು, ಸದರಿ ಕಟ್ಟಡದಲ್ಲಿ ಸಾರ್ವಜನಿಕರಿಗೆ ಕುಳಿತುಕೊಳ್ಳಲು ಸ್ಥಳವಕಾಶ, ಕುಡಿಯುವ ನೀರಿನ ವ್ಯವಸ್ಥೆ ಮತ್ತು ಶೌಚಾಲಯದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. |
| ಆ | ಈ ಕಛೇರಿಯು ಚನ್ನಪಟ್ಟಣ ಟೌನ್‌ನಲ್ಲಿರುವ ಕುವೆಂಪುನಗರ 1ನೇ ಅಡ್ಡರಸ್ತೆಯ ಅತಿ ಕಿರಿದಾದ ರಸ್ತೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಆಸ್ತಿ-ಪಾಸ್ತಿಗಳ ದಾಖಲಾತಿಗಾಗಿ ಮತ್ತು ನೋಂದಣಿಗಾಗಿ ಈ ಕಛೇರಿಗೆ ಬರುವವರ ವಾಹನ ನಿಲುಗಡೆಯಿಂದ ಮತ್ತು ದಿನನಿತ್ಯ ಅದೇ ರಸ್ತೆಯಲ್ಲಿ ಓಡಾಡುವ ವಾಹನಗಳಿಂದ ಸಾರ್ವಜನಿಕರು ಬಹಳ ತೊಂದರೆಯೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಚನ್ನಪಟ್ಟಣ ಉಪನೋಂದಣಿ ಕಛೇರಿ ಕಟ್ಟಡವು ಬೆಂಗಳೂರು ಮೈಸೂರು ರಸ್ತೆಯಿಂದ ಸುಮಾರು (ರಾಷ್ಟ್ರೀಯ ಹೆದ್ದಾರಿ) 150 ಅಡಿಗಳ ಸಮೀಪದಲ್ಲಿದ್ದು, ಈ ಕಛೇರಿಯ ಅಕ್ಕಪಕ್ಕದಲ್ಲಿ ಬಿ.ಎಸ್.ಎನ್.ಎಲ್ ಕಛೇರಿ, ಕರ್ನಾಟಕ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ, ಹಾಗೂ ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್, ಎ.ಟಿ.ಎಂಗಳು ಹಾಗೂ ಇನ್ನಿತರೆ ವಾಣಿಜ್ಯ ಅಂಗಡಿ ಮಳಿಗೆಗಳಿದ್ದು, ಸಾರ್ವಜನಿಕರು ತಮ್ಮ ದಿನ ನಿತ್ಯದ ಕೆಲಸಗಳಿಗೆ ಬರುವುದರಿಂದ ಸಾರ್ವಜನಿಕರ ಓಡಾಟಕ್ಕೆ ಹಾಗೂ ವಾಹನಗಳ ನಿಲುಗಡೆಗೆ ಈ ರಸ್ತೆಯಲ್ಲಿ ಸ್ವಲ್ಪ ಮಟ್ಟಿಗೆ ತೊಂದರೆ ಉಂಟಾಗುತ್ತಿದೆ. ಆದರೆ ನೋಂದಣಿಗೆ ಬರುವ ಸಾರ್ವಜನಿಕರಿಂದ ಮಾತ್ರವೇ ಸದರಿ ರಸ್ತೆಯಲ್ಲಿ ಓಡಾಡುವವರಿಗೆ ತೊಂದರೆ ಆಗುತ್ತಿರುವುದಿಲ್ಲ. |
| ಇ | ಬಂದಿದ್ದಲ್ಲಿ, ಚನ್ನಪಟ್ಟಣ ಟೌನ್‌ನಲ್ಲಿರುವ ಉಪನೋಂದಣಾಧಿಕಾರಿಗಳ ಕಛೇರಿಯನ್ನು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದಿಂದ ಬೇರೆ ಕಡೆ ಸ್ಥಳಾಂತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ಮಾಹಿತಿ ನೀಡುವುದು) | |

ಸಂಖ್ಯೆ: ಕಂಇ/332/ಎಂಎನ್ಎಸ್ಎ/2022

(ಆರ್.ಅಶೋಕ)
ಕಂದಾಯ ಸಚಿವರು